ಕರ್ನಾಟಕ ಸರ್ಕಾರ

**ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 260 012.**

ಸಂಖ್ಯೆ: ಪಪೂಶಿ/ಇ-ಆಡಳಿತ/NADAKACHERI /2015-16 ದಿನಾಂಕ 05.11.2015.

## ಸುತ್ತೋಲೆ

ವಿಷಯ: ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿರುವ ಕಾಗದರಹಿತ ಪ್ರಮಾಣ ಪತ್ರಗಳ ಸೇವೆಯನ್ನು ಬಳಸುವ ಬಗ್ಗೆ.
ಉಲ್ಲೇಖ:1.ಆಯುಕ್ತರು, ಭೂಮಾಪನ ಇಲಾಖೆ, ನಿರ್ದೇಶಕರು, ಭೂಮಿ, ಯು ಪಿ ಓ ಆರ್,
ಹಾಗೂ ಎ ಜೆ ಎಸ್ ಕೆ ಬೆಂಗಳೂರು ಇವರ ಪತ್ರ ದಿನಾಂಕ:03.06.2015.
2.ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ ಕೆ ಆರ್ ವೃತ್ತ,
ಬೆಂಗಳೂರು ಇವರ ಪತ್ರ ದಿನಾಂಕ:19.09.2015.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಕಂಇ 44 ಭೂದಾಅ 2014 ದಿನಾಂಕ:19.02.2014ರಲ್ಲಿ ಮುದ್ರಿತ ಪ್ರಮಾಣ ಪತ್ರಗಳ ಬದಲಿಗೆ ಕಾಗದ ರಹಿತ ಪ್ರಮಾಣ ಪತ್ರಗಳ ಸೇವೆಯನ್ನು ಸಾರ್ವಜನಿಕ ಸೌಲಭ್ಯಗಳನ್ನು ಮಂಜೂರು ಮಾಡಲು ಎಲ್ಲಾ ಇಲಾಖೆಗಳು ಈ ಉಪಯೋಗ ಪಡೆಯುವಂತೆ ಆದೇಶವಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಕಾಗದ ರಹಿತ ಪ್ರಮಾಣ ಪತ್ರದ ಸೇವೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಉಲ್ಲೇಖ-(2)ರಲ್ಲಿ ದಿನಾಂಕ:26.08.2015 ರಂದು ನಡೆದ ಸಭೆಯಲ್ಲಿ ಈ ಕೆಳಗೆ ನಮೂದಿಸಿದ ಅಂಶಗಳ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

1. ಅರ್ಜಿದಾರರು/ವಿದ್ಯಾರ್ಥಿಗಳು ವಿವಿಧ ಪ್ರಮಾಣ ಪತ್ರ ಕೋರಿ ಸಲ್ಲಿಸುವ ಅರ್ಜಿಗಳನ್ನು ವಿದ್ಯುನ್ಮಾನವಾಗಿ ಅನುಮೋದಿಸಿದ ನಂತರ ಪ್ರಮಾಣ ಪತ್ರಗಳಿಗೆ ಒಂದು ವಿಶಿಷ್ಟವಾದ ಗಣಕೀಕೃತ ಸಂಖ್ಯೆಯನ್ನು ನೀಡಲಾಗುತ್ತಿದೆ.
2. ಈ ಪ್ರಮಾಣ ಪತ್ರದ ಸಂಖ್ಯೆಯನ್ನು ಅರ್ಜಿದಾರರು/ವಿದ್ಯಾರ್ಥಿಗಳು ಶೈಕ್ಷಣಿಕ ಉದ್ದೇಶಕ್ಕಾಗಿ ಶಾಲೆಗಳಿಗೆ/ಇಲಾಖೆಗೆ ಸಲ್ಲಿಸಬೇಕಾಗಿರುವ ಅರ್ಜಿಯಲ್ಲಿ ನಮೂದಿಸಬೇಕಾಗಿರುತ್ತದೆ. ಅರ್ಜಿಯೊಂದಿಗೆ ಮುದ್ರಿತ ಪ್ರಮಾಣ ಪತ್ರಗಳನ್ನು ಲಗತ್ತಿಸುವ ಅಗತ್ಯವಿರುವುದಿಲ್ಲ.
3. ನಾಡ ಕಚೇರಿ www.nadakacheri.karnataka.gov.in ವೆಬ್ಸೈಟ್‌ಗೆ ಪ್ರವೇಶ ಹೊಂದಿ ನಾಡ ಕಚೇರಿ ಪ್ರಮಾಣ ಪತ್ರ ಪರಿಶೀಲನೆ ಲಿಂಕ್‌ನಲ್ಲಿ ಗಣಕೀಕೃತ ಪ್ರಮಾಣ ಪತ್ರದ ಸಂಖ್ಯೆಯನ್ನು ನಮೂದಿಸಿದಲ್ಲಿ ನೈಜ ಪ್ರಮಾಣ ಪತ್ರದ ಸಾಫ್ಟ್ ಪ್ರತಿಯನ್ನು ವೀಕ್ಷಿಸಬಹುದಾಗಿದೆ.
4. ಕಾನೂನು ರೀತಿಯಲ್ಲಿ ಎಲ್ಲಾ ಉದ್ದೇಶಗಳಿಗೆ ಪ್ರಮಾಣ ಪತ್ರದಲ್ಲಿರುವ ಗಣಕೀಕೃತ ಸಂಖ್ಯೆಯನ್ನು ಉಪಯೋಗಿಸಿಕೊಳ್ಳುವುದು ಹಾಗೂ ಪ್ರಮಾಣ ಪತ್ರ ಬದಲು ಪ್ರಮಾಣ ಪತ್ರ ಸಂಖ್ಯೆ ಮಾನ್ಯವಾಗಿರುತ್ತದೆ.
5. ಇದಲ್ಲದೇ ಪ್ರಮಾಣ ಪತ್ರದ ನೈಜತೆಯನ್ನು ಎಸ್ ಎಂ ಎಸ್ ಮೂಲಕ ಪರೀಕ್ಷಿಸಲು-

- ಎಸ್ ಎಂ ಎಸ್ ಸಂಖ್ಯೆ 51969ಗೆ ಗೆ "KA<Certificate Number>" ಎಂದು ಎಸ್‌ಎಂಎಸ್ ಮಾಡಬಹುದಾಗಿದೆ.
- ಎಸ್ ಎಂ ಎಸ್ ಗೆ ಪ್ರತಿಕ್ರಿಯೆ ನೀಡಿ, ಪ್ರಮಾಣ ಪತ್ರದ ಪೂರ್ಣ ಮಾಹಿತಿಯನ್ನು ನೀಡಲಾಗುತ್ತದೆ.

6. ಕಾಗದ ರಹಿತ ಪ್ರಮಾಣ ಪತ್ರದ ಸೇವೆಯಲ್ಲಿ ನೀಡುವ ಗಣಕೀಕೃತ ಪ್ರಮಾಣ ಪತ್ರದ ಸಂಖ್ಯೆಯು ಪರಿಶೀಲನಾ ನಂತರ ನೈಜ ಮುದ್ರಿತ ಪ್ರಮಾಣ ಪತ್ರಕ್ಕಿರುವ ಮಾನ್ಯತೆ ಹೊಂದಿರುತ್ತದೆ. ಆದ್ದರಿಂದ ಪ್ರಸ್ತುತದ ವ್ಯವಸ್ಥೆಯಲ್ಲಿ ವಿತರಿಸುತ್ತಿರುವ ಮುದ್ರಿತ ಪ್ರಮಾಣ ಪತ್ರದ ಅಗತ್ಯವಿರುವುದಿಲ್ಲ.
7. ಒಂದು ವೇಳೆ ಅರ್ಜಿದಾರರು/ವಿದ್ಯಾರ್ಥಿಗಳು ಮುದ್ರಿತ ಪ್ರಮಾಣ ಪತ್ರಗಳನ್ನು ನೀಡಿದಲ್ಲಿ ಕ್ರ ಸಂ 1-5ರಲ್ಲಿ ವಿವರಿಸಿರುವ ಅಂಶದನ್ವಯ ಪ್ರಮಾಣ ಪತ್ರದ ಸಂಖ್ಯೆಯನ್ನು ಪರಿಶೀಲಿಸಿ, ದಾಖಲೆಗಳಿಗಾಗಿ ಪ್ರಮಾಣ ಪತ್ರವನ್ನು ಮುದ್ರಿಸಿಕೊಂಡ ಅರ್ಜಿದಾರರಿಗೆ/ವಿದ್ಯಾರ್ಥಿಗಳಿಗೆ ಮೂಲ ಪ್ರಮಾಣ ಪತ್ರವನ್ನು ಹಿಂತಿರುಗಿಸಬೇಕಾಗುತ್ತದೆ.

ಮೇಲ್ಕಂಡ ಅಂಶಗಳಂತೆ, ಆನ್‌ಲೈನ್ ಮೂಲಕ ಪರಿಶೀಲಿಸಿ, ದೃಢೀಕರಿಸಿದ ಪ್ರಮಾಣ ಪತ್ರಗಳು ಮಾನ್ಯತೆ ಹೊಂದಿರುತ್ತದೆ ಹಾಗೂ ಈ ಹಿಂದೆ ಸುರಕ್ಷಿತ ಹಾಳೆಗಳಲ್ಲಿ ಮುದ್ರಿಸಿ ವಿತರಿಸಲಾದ ಪ್ರಮಾಣ ಪತ್ರಗಳು ಕೂಡ ಮುಂದಿನ ಆದೇಶದವರೆಗೆ ಮಾನ್ಯತೆ ಹೊಂದಿರುತ್ತದೆ. ಅದ್ದರಿಂದ ಈ ವಿಷಯದ ಬಗ್ಗೆ ತಮ್ಮ ವೈಯಕ್ತಿಕ ಗಮನಹರಿಸಿ ಈ ಕಾಗದ ರಹಿತ ಪ್ರಮಾಣ ಪತ್ರದ ಸೇವೆಯನ್ನು ಅಂಗೀಕರಿಸಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲಾ ಪ್ರಾಂಶುಪಾಲರ ಗಮನಕ್ಕೆ ತರಲು ಸೂಚಿಸಿದೆ.

ಪ್ರತಿಗಳು:

1. ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆ, ಕಂದಾಯ ಇಲಾಖೆ, ಕಂದಾಯ ಇಲಾಖೆ, ಕೆ ಆರ್ ವೃತ್ತ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ನಿರ್ದೇಶಕರ ಆಪ್ತ ಶಾಖೆಗೆ
3. ಜಂಟಿ ನಿರ್ದೇಶಕರು(ಆಡಳಿತ)/(ಶೈಕ್ಷಣಿಕ)/(ಮಾನ್ಯತೆ ಮತ್ತು ಅನುದಾನ)/(ಪರೀಕ್ಷೆ) ಆಪ್ತ ಶಾಖೆಗೆ
4. ಉಪನಿರ್ದೇಶಕರು(ಆಡಳಿತ)/(ಶೈಕ್ಷಣಿಕ)/(ಮಾನ್ಯತೆ ಮತ್ತು ಅನುದಾನ)/(ಪರೀಕ್ಷೆ) ಆಪ್ತ ಶಾಖೆಗೆ
5. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ-ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು ಕ್ರಮಕ್ಕೆ.
6. ಕಚೇರಿ ಪ್ರತಿ.